KARNATAKA LEGISLATIVE ASSEMBLY

Tuesday, the 25th March 1975, Chaitra 4, 1897 S. E.

The House met in the Assembly Chamber, Vidhana Soudha, at Twelve of the Clock.

MADAM SPEAKER (Smt. K. S. Nagarathnamma) in the Chair.

MATTER UNDER RULE 312

Re: Strike of the Autorickshaw drivers

ಶ್ರೀ ಸಿ. ಬೈರೇಗೌಡ (ವೇಮಗಲ್) :—ನಮ್ಮ ವಿಧಾನ ಸೌಧದ ಮುಂದೆ ಅಟೋ ರಿಕ್ಷಾ ಚಾಲಕರು ಉಪವಾಸ ಮಾಡುತ್ತಿದ್ದಾರೆ, ಅದರ ಬಗ್ಗೆ ಸರ್ಕಾರ ದವರು ಹೇಳಿಕೆ ಕೊಡುತ್ತೇವೆಂದು ಹೇಳುತ್ತಿದ್ದರು

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ) :—ಅಟೋರಿಕ್ಷಾ ಚಾಲಕರು ಮುಷ್ಕರ ಮಾಡುತ್ತಿದ್ದಾರೆ. ಇದರ ಬಗ್ಗೆ ನಾಳೆ ಸರಕಾರ ಹೇಳಿಕೆ ಕೊಡುತ್ತೇವೆಂದು ಹೇಳಿ ಮೂರು ನಾಲ್ಕು ದಿನಗಳಾದರೂ ಇದುವರೆಗೆ ಸರಕಾರ ಹೇಳಿಕೆ ಕೊಡಲಿಲ್ಲ. ಇದರಿಂದ ಇಲ್ಲಿ ತಮ್ಮ ಮೂಲಕ ಸರಕಾರದವರನ್ನು ಕೇಳಬೇಕಾಗಿ ಬಂದಿದೆ.

ಶ್ರೀ ಬೆಟ್ಟಸ್ವಾಮಿಗೌಡ :—ಸುಗ್ಗನಹಳ್ಳಿ ಜಾತ್ರೆ ಬಗ್ಗೆ ಸರಕಾರದ ಹೇಳಿಕೆ ಕೊಡಬೇಕೆಂದು ಕಳುಹಿಸಿದ್ದೆ. × × × ×

ಅಧ್ಯಕ್ಷರು :— ಸರಕಾರದ ಉತ್ತರ ಮಾನ್ಯ ಸದಸ್ಯರಿಗೆ ಬೇಕಿಲ್ಲವೇ ? ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು. I order not to take down anything.

× × × × × × × ×

× × × × Matter not recorded as ordered by the Chair.

SRI MOHAMED ALI :—As per the promise made on the floor of the House, the Government has taken a decision fixing the minimum fare to be charged by the Autorickshaw at 75 paise. This has been done after the approval of the S. T. A.

BUDGET ESTIMATES FOR 1975-76

DEMANDS FOR GRANTS

(Demand Nos. 1, 16, 49 and 50 (Debate Continued).

‡ಶ್ರೀ ವಿ ಎಸ್. ಕಾಜಲಗಿ (ರೇಷ್ಮೆ ಶಾಖೆಯ ರಾಜ್ಯ ಮಂತ್ರಿಗಳು) :—ಘನ್ಯ ಅಧ್ಯಕ್ಷರೇ, ನಿನ್ನೆಯಿಂದ ರೇಷ್ಮೆ ಇಲಾಖೆಯ ಬೇಡಿಕೆಗಳ ಮೇಲೆ ಈ ಸದನದಲ್ಲಿ ಸಾಕಷ್ಟು ಅನುಭವವುಳ್ಳ ಸದಸ್ಯರು ಎಂದರೆ ಶ್ರೀ ವೆಂಕಟಪ್ಪನವರು, ಶ್ರೀ ರಾಚೇಗೌಡರು, ಶ್ರೀ ಬಿ. ಪುಟ್ಟಸ್ವಾಮಯ್ಯ, ಕೆ. ಸಿದ್ದಯ್ಯ, ಶ್ರೀ ಸಿದ್ದ ಮಾದಯ್ಯ, ಶ್ರೀ ಹೆಚ್. ಜಿ. ಚನ್ನಪ್ಪ ಮತ್ತು ಶ್ರೀ ಟಿ. ಆರ್. ಶಾಮಣ್ಣನವರು ಬಹಳ ಅವಶ್ಯಕವಾದ ಸಲಹೆಯನ್ನು ರೇಷ್ಮೆ ಅಭಿವೃದ್ಧಿ ಬಗ್ಗೆ ಕೊಡುತ್ತಾ ಕೆಲವು ಟೀಕೆಗಳನ್ನು ಮಾಡಿದ್ದಾರೆ. ಇದಕ್ಕೆ ಪ್ರತ್ಯುತ್ತರವಾಗಿ ಕೆಲವು ವಿಚಾರಗಳನ್ನು ಇಲ್ಲಿ ತಿಳಿಸಬೇಕೆಂದಿದ್ದೇನೆ. ನಮ್ಮ ಭಾರತ ದೇಶ ಬಡ ದೇಶ. ಈ ದೇಶದಲ್ಲಿ ಸಾಕಷ್ಟು ಬಡಜನರು ಉಪ ಜೀವನ ಮಾಡಿಕೊಳ್ಳಲು ಇಂತಹ ರೇಷ್ಮೆ ಉದ್ಯೋಗವನ್ನು ತೆಗೆದುಕೊಳ್ಳುತ್ತಾರೆ ಮತ್ತು ಬಡವರು ತಮ್ಮ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳಲು ರೇಷ್ಮೆ ಉದ್ಯೋಗ ಒಂದು ಸಾಧನೆಯಾಗುತ್ತದೆ ಎಂದು ಹೇಳುತ್ತೇನೆ. ಏಕೆಂದರೆ ಈ ಉದ್ಯೋಗವನ್ನು ಹೆಣ್ಣು ಮಕ್ಕಳು ಹಾಗೂ ಮನೆಯ ಯಜಮಾನರು ಎಲ್ಲರೂ ಕೂಡಿಕೊಂಡು ಅಲ್ಪ ಹಣದಲ್ಲಿ ಈ ಉದ್ಯೋಗವನ್ನು ಶುರು ಮಾಡಿ ಉಪಜೀವನ ನಡೆಸಿಕೊಳ್ಳಲು ಬೇಕಾದ ವಾತಾವರಣವನ್ನು ನಾವು ಅವರಿಗೆ ತಲ್ಪಿಸಿಕೊಡಬೇಕಾಗಿದೆ. ಮಹಿಳೆಯರು ಪ್ರತಿ ಮನೆಯಲ್ಲೂ ಇಂತಹ ಒಂದು ಉದ್ಯೋಗವನ್ನು ಮಾಡಿದರೆ ನಮ್ಮ ದೇಶದ ಬಡ ಜನರ ಆರ್ಥಿಕ ಸ್ಥಿತಿ ಪರಿಹರಿಸಿಕೊಳ್ಳಲು ಸಾಧ್ಯವಾಗುತ್ತದೆ. ಕರ್ನಾಟಕದಲ್ಲಿ ಈ ಉದ್ಯೋಗಕ್ಕೆ ಬಹಳ ಪ್ರಾಮುಖ್ಯತೆ ಇದೆ. ರೇಷ್ಮೆ ಉದ್ಯೋಗದಲ್ಲಿ ಸುಮಾರು ನೂರರಲ್ಲಿ 85 ಪಾಲು ಕರ್ನಾಟಕದಿಂದ ರೇಷ್ಮೆ ಉತ್ಪಾದನೆಯಾಗುತ್ತದೆ.

---

‡Asterisks indicate that remarks or speeches have not been revised by the member concerned.